ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಜೆ. ಹೆಚ್. ಪಟೇಲರ ಖಾತೆಗೆ ಸಂಬಂಧಪಟ್ಟಂತೆ ಹೆಂಡ ತಯಾರಿಕೆಗೆ ಗುಳುಮಾವು ಚಿಕ್ಕೆಯನ್ನು ಉಪಯೋಗಿಸುತ್ತಿದ್ದಾರೆ ಎಂದು ಹೇಳುತ್ತಾರೆ. ಇದರಿಂದ ಗುಳುಮಾವು ಬೆಳೆ ಹಾಳಾಗುವುದರ ಜೊತೆಗೆ ಆರೋಗ್ಯಕ್ಕೂ ಹಾನಿಯಾಗುತ್ತದೆ. ಮಾನ್ಯ ಪಟೇಲ್ ಅವರು ಇದನ್ನು ಪರಿಶೀಲಿಸಿದರೆ ಒಳ್ಳೆಯದು.

ಶ್ರೀ ಬಿ. ಎ. ಜೀವಿಜಯ.—ಅದನ್ನು ನಾನು ನೋಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಚಿಕ್ಕೆಯನ್ನು ಉಪಯೋಗಿಸಿ ತಯಾರಿಸುವ ಮದ್ಯಕ್ಕೆ ಸಾರಾಯಿ ಎಂದು ಕರೆಯುತ್ತಾರೆ. ಅದು ಹೆಂಡ ಅಲ್ಲ ನಿಮಗೆ ಅದರ ವಿಷಯ ಗೊತ್ತಿಲ್ಲ.

ವಿಷಯ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1983–84ನೇ ಸಾಲಿನಲ್ಲಿ ರಸ್ತೆಗಳಿಗೆ ದಾಮರು ಹಾಕುವ ಕುರಿತು.

ಪ್ರಶ್ನೆ ಸಂಖ್ಯೆ 683 (1451) ಶ್ರೀ ಪ್ರತಾಪ ಚಂದ್ರ ಶೆಟ್ಟಿ, (ಕುಂದಾಪುರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1983-84ನೇ ಸಾಲಿನಲ್ಲಿ ಎಷ್ಟು ಕಿ. ಮಿ. ರಸ್ತೆಗಳಿಗೆ ಡಾಮರು ಹಾಕಲಾಯಿತು ? (ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಆ. ಈ ಬಗ್ಗೆ ಕ್ಷೇತ್ರದಿಂದ ಕ್ಷೇತ್ರಕ್ಕೆ ವ್ಯತ್ಯಾಸವಿದ್ದರೆ ಅದಕ್ಕೆ ಕಾರಣವೇನು ? ಹಾಗೂ ಅದನ್ನು ಸರಿಪಡಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ. 177.79 ಕಿ. ಮಿ. ಉದ್ದ ರಸ್ತೆಗಳಿಗೆ ಡಾಮರು ಹಾಕಲಾಗಿದೆ. ಕ್ಷೇತ್ರವಾರು ವಿವರಗಳು ಕೆಳಗಿನಂತಿವೆ.

1.	ಉಡುಪಿ	....	12.56 ಕಿ.ಮಿ.
2.	ಬ್ರಹ್ಮಾವರ	....	11.20 ಕಿ.ಮಿ.
3.	ಕಂಪು	..	11.70 ಕಿ.ಮಿ.
4.	ಕುಂದಾಪುರ	....	4.69 ಕಿ.ಮಿ.
5.	ಬೈಂದೂರು	...	5.90 ಕಿ.ಮಿ.
6.	ಕಾರ್ಕಳ	....	26.20 ಕಿ.ಮಿ.
7.	ಬೆಳ್ತಂಗಡಿ	....	19.00 ಕಿ.ಮಿ.
8.	ಮೂಡಬಿದಿರೆ	...	10.15 ಕಿ.ಮಿ.
9.	ಸೂರತ್ಕಲ್	....	5.30 ಕಿ.ಮಿ.
10.	ಬಂಟ್ವಾಳ	....	11.94 ಕಿ.ಮಿ.
11.	ಮಂಗಳೂರು	....	0.75 ಕಿ.ಮಿ.
12.	ಉಳ್ಳಾಲ	....	8.90 ಕಿ.ಮಿ.
13.	ಪುತ್ತೂರು	....	24.91 ಕಿ.ಮಿ.
14.	ಸುಳ್ಯ	....	14.55 ಕಿ.ಮಿ.
			10.04 ಕಿ.ಮಿ.
			177.79 ಕಿ.ಮಿ.

ಆ. ಪ್ರತಿ ಕ್ಷೇತ್ರದಲ್ಲಿನ ರಸ್ತೆಗಳಲ್ಲಿನ ವಾಹನ ಸಂಚಾರ ಒತ್ತಡ, ರಸ್ತೆಯ ಸ್ಥಿತಿ ಮತ್ತು ಅವುಗಳ ಪ್ರಾಮುಖ್ಯತೆಯನ್ನು ಮನಗಂಡು ಡಾಮರು ಹಾಕುವ ಕೆಲಸವನ್ನು ಕೈಗೊಳ್ಳಲಾಗುವುದು.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಈ ಉತ್ತರ ಸತ್ಯಕ್ಕೆ ದೂರವಾದುದು. ವಾಹನ ಸಂಚಾರದ ಒತ್ತಡ, ರಸ್ತೆಯ ಸ್ಥಿತಿಗತಿಗಳನ್ನು ನೋಡಿ ಅದರ ಪ್ರಾಮುಖ್ಯತೆಯನ್ನು ಮನಗಂಡು ಟಾರ್ ಹಾಕಿದ್ದರೆ ನಾನೂ ಕೂಡ ಅದನ್ನು ಸ್ವಾಗತಿಸುತ್ತೇನೆ. ವಿರೋಧಪಕ್ಷದ ನಾಯಕರು ಮತ್ತು ನಮ್ಮ ನಾಯಕರು ಇದ್ದಾರೆಂದು ಅಲ್ಲಿ ಪ್ರಥಮ ಪ್ರಾಶಸ್ತ್ಯ ಕೊಟ್ಟಿದ್ದಾರೇನೊ. ಆದೇರೀತಿಯಲ್ಲಿ ಭಾರತೀಯ ಜನತಾ ಪಕ್ಷ ನಿಮಗೆ.... ...

ಅಧ್ಯಕ್ಷರು.—ಉಪಪ್ರಶ್ನೆ ಕೇಳಿ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಕುಂದಾಪುರದವರೆಗೆ 4.6 ಕಿಲೋಮೀಟರ್ ಒಂದು ರಸ್ತೆಯನ್ನು ಮಾಡಿದ್ದೀರಿ. ಇದು ತುಂಬಾ ಕಡಿಮೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ರೀತಿಯಾಗಿ ಪ್ರದೇಶ ಪ್ರದೇಶದಲ್ಲೂ ಇದ್ದರೆ ಇನ್ನು, ಜಿಲ್ಲೆ ಜಿಲ್ಲೆಯಲ್ಲಿ ಎಷ್ಟು ವ್ಯತ್ಯಾಸ ಇರಬಹುದು ? ದಕ್ಷಿಣ ಕನ್ನಡ ಜಿಲ್ಲೆಗೂ ಮತ್ತು ಹಾಸನ ಜಿಲ್ಲೆಗೂ ಎಷ್ಟು ವ್ಯತ್ಯಾಸ ಇರಬಹುದು ಎಂಬ ಸಂಶಯ, ಪ್ರಶ್ನೆ ನನ್ನಲ್ಲಿ ಉದ್ಭವವಾಗುತ್ತಿದೆ.

ಅಧ್ಯಕ್ಷರು.—ಅವರಿಗೆ ಸಂಶಯ ಉದ್ಭವ ಆಗುತ್ತಿದೆಯಂತೆ ; ಉತ್ತರ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಬೈಂದೂರು ಜನತಾ ಪಕ್ಷದ ಮತಕ್ಷೇತ್ರ. ಅಲ್ಲೂ 5 ಕಿಲೋಮೀಟರ್ ರಸ್ತೆಯನ್ನು ಮಾಡಿದ್ದೇವೆ. ಕುಂದಾಪುರದಲ್ಲೂ 5 ಕಿಲೋಮೀಟರ್ ರಸ್ತೆ ಮಾಡಿದ್ದೇವೆ, ಇದರಲ್ಲಿ ಪಾರ್ಟಿ ಪ್ರಶ್ನೆ ಉದ್ಭವವಾಗುವುದಿಲ್ಲ. ಏತಕ್ಕೆಂದರೆ ಎಲ್ಲೆಲ್ಲಿ ಡಾಮರು ರಸ್ತೆ ಮಾಡಬೇಕಾಗುತ್ತದೋ, ಅಲ್ಲಿ ಟ್ರಾಫಿಕ್ ಲೆಕ್ಕಾಚಾರ ನೋಡಿ ಮಾಡಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರು ಏನ್ನುವ ಕಾರಣ ಅಲ್ಲ. ಅವಶ್ಯಕತೆಗೆ ಅನುಗುಣವಾಗಿ ಮಾಡಬೇಕಾಗುತ್ತದೆ. 1982-83ರಲ್ಲಿ ಒಂದು ಕಿಲೋಮೀಟರ್ ರಸ್ತೆ ಕೂಡ ಮಾಡಿರಲಿಲ್ಲ. ಈ ವರ್ಷ 5 ಕಿಲೋಮೀಟರ್ ರಸ್ತೆಯನ್ನಾದರೂ ಮಾಡಿದ್ದೇವೆ, ಬೇಕಾದರೆ ಇನ್ನೂ ಸ್ವಲ್ಪ ಹೆಚ್ಚು ಮಾಡೋಣ. ಆದರೆ ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ.

ಶ್ರೀ ಕೆ. ರಾಮಭಟ್.—ಈ ಹೊಸ ಡಾಮರು ಹಾಕುವ ಕೆಲಸ ಸ್ಪಿಲ್‌ಓವರ್ ಕೆಲಸವೋ ಅಥವಾ ಹೊಸ ಕೆಲಸವೋ ?

ಶ್ರೀ ಹೆಚ್. ಡಿ. ದೇವೇಗೌಡ.—ಇದರೊಳಗೆ 1983-84ರಲ್ಲಿ ಒಂದು ರೋಡ್‌ನಲ್ಲಿ ಹತ್ತು ಕಿಲೋಮೀಟರ್ ಇದ್ದರೆ, 1982-83ರಲ್ಲಿ 2 ಕಿಲೋಮೀಟರ್ ಇರುತ್ತದೆ. ಒಟ್ಟು ಎಷ್ಟು ಮೈಲೇಜ್ ಕವರ್ ಮಾಡಿದ್ದೇವೆ ಎಂದರೆ 177 ಕಿಲೋಮೀಟರ್. ಇಲ್ಲಿ ಕ್ಯಾರಿಡ್‌ಓವರ್ ಪ್ರಶ್ನೆಗಿಂತ ಹೆಚ್ಚಾಗಿ ಎಷ್ಟು ಅಸ್ಫಾಲ್ಟ್ ಮಾಡಿದ್ದೇವೆ ಏಂದು ಹೇಳಿದ್ದೇನೆ. ಸ್ಟೇಟ್ ಆವರೇಜ್ 46 ಕಿಲೋಮೀಟರ್ ಇದ್ದರೆ ಮಂಗಳೂರಿನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ 70 ಪರ್ಸೆಂಟ್ ಇದೆ. ಬಂದರೆಡು ತಾಲ್ಲೂಕಿನಲ್ಲಿ ಮಾತ್ರ 50 ಪರ್ಸೆಂಟ್ ಇದೆ. ಆದರೂ ಕೂಡ ಸ್ಟೇಟ್ ಎವರೇಜ್‌ಗೆ ಹೋಲಿಸಿದರೆ ಬಹಳ ಹೆಚ್ಚಿನ ಪ್ರಗತಿ ಇಲ್ಲಿ ಆಗಿದೆ.

ವಿಷಯ ; ಕರ್ನಾಟಕ ಶ್ರೇಷ್ಠ ನ್ಯಾಯಾಲಯ ಡ.ಸಿ.ನಂ. 14326-1978ರಲ್ಲಿ ಪಾಟಕಾರಿ ಕೆಲಸಗಾರರ ಬಗ್ಗೆ ಕೊಟ್ಟಿರುವ ತೀರ್ಪನ್ನು ಜಾರಿಗೆ ತರುವುದು.

ಪ್ರ. ಸಂಖ್ಯೆ : 684 (1654) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಘಟಪ್ರಭಾ ಮತ್ತು ಮಲಪ್ರಭಾ ನೀರಾವರಿ ಕ್ಷೇತ್ರದ ಪಾಟಕಾರಿ ಕೆಲಸಗಾರರ ವೇತನ ಪುನರ್‌ವಿಮರ್ಶೆ ಬಗ್ಗೆ ಶ್ರೇಷ್ಠ ನ್ಯಾಯಾಲಯ ಡ.ವಿ. ನಂ. 14326-79/ ಖಟ್ಟಲೆಯಲ್ಲಿ 16-3-1983ರಂದು ಕೊಟ್ಟ ತೀರ್ಪು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಆದರ ತೀರ್ಪು ಏನು ;

ಆ) ಸದರಿ ತೀರ್ಪಿನ ಬಗ್ಗೆ ಸರ್ಕಾರದವರು ಮೇಲ್ಮನವಿ ಮಾಡಿದ್ದರೆ ಹಾಗಿದ್ದಲ್ಲಿ ಮೇಲ್ಮನವಿಯ ಬಗ್ಗೆ ಆದ ತೀರ್ಪನ್ನು ಸರ್ಕಾರದ ಮೇಲ್ಮನವಿ ತಿರಸ್ಕೃತವಾಗಿದ್ದರೆ ಕೆಳ ನ್ಯಾಯಾಲಯದ ತೀರ್ಪನ್ನು ಜಾರಿಗೆ ಕೊಡಲಾಗುವುದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು. ದಿನಾಂಕ 1-1-70ರ ಮೊದಲು ಇದ್ದ ವೇತನ ಶ್ರೇಣಿಯನ್ನು ಸರಿಪಡಿಸಿ ವರ್ಕ್ ಚಾರ್ಜ್ ಸಿಬ್ಬಂದಿಯಲ್ಲಿ ಕೆಲಸ ಮಾಡುವ ಪಾಟಕಾರಿ ನೌಕರರಿಗೆ ತಕ್ಕುದಾದ ವೇತನ ಶ್ರೇಣಿಯನ್ನು ಕೊಡಲು ಉಚ್ಚ ನ್ಯಾಯಾಲಯವು ತನ್ನ ದಿನಾಂಕ 10-3-1983ರ ಆಜ್ಞೆಯಲ್ಲಿ ಸರ್ಕಾರಕ್ಕೆ ಆದೇಶವನ್ನು ನೀಡಿದೆ. ಈ ಆಧಾರದ ಮೇಲೆ ಉಚ್ಚ ನ್ಯಾಯಾಲಯವು ವರ್ಕ್‌ಚಾರ್ಜ್ ಸಿಬ್ಬಂದಿಯಲ್ಲಿ ಕೆಲಸ ಮಾಡುವ ನೌಕರರು ಪುನರ್‌ವಿಮರ್ಶೆಯ ಪ್ರಕಾರ ಹೊಸ ವೇತನಾ ಶ್ರೇಣಿಗೆ ಅರ್ಹರೆಂದು ಪುನಃ ಆಜ್ಞೆಯನ್ನು ಹೊರಡಿಸಿದೆ.

ಆ) ಹೌದು. ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದಲ್ಲಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ರೀತಿಯ ಆಧಾರದ ಮೇಲೆ ಸರ್ಕಾರವು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವುದು.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಉಚ್ಚ ನ್ಯಾಯಾಲಯ ತೀರ್ಪು ಕೊಟ್ಟಿದೆ. ರಾಷ್ಟ್ರದ ಶ್ರೇಷ್ಠ ನ್ಯಾಯಾಲಯವು ತೀರ್ಪು ಕೊಟ್ಟಿದೆ. ಆದರೂ ಕೂಡ ಇದನ್ನು ಜಾರಿಗೆ ತರುವುದಕ್ಕೆ ತೊಂದರೆ ಏನಿದೆ?